ಸಾಕ್ಷಿಯನ್ನು ದಿನಾಂಕಃ **30.06.2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಲ್.ಎನ್. ವಕೀಲರಿಂದಃ**

ನಾನು ಹೈಸ್ಕೂಲ್‌ನಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸಿ ನಿವೃತ್ತನಾಗಿದ್ದೇನೆ ಎಂದರೆ ಸರಿ. ನನ್ನ ತಂದೆಯವರೂ ಸಹ ನಿವೃತ್ತ ಹೈಸ್ಕೂಲ್ ಶಾಲಾ ಶಿಕ್ಷಕರೆಂದರೆ ಸರಿ. 3 ನೇ ವಾದಿಯಾದ ಗಜಾನನ ಪಾಯಕ ನಾಯ್ಕ ನನ್ನ ಚಿಕ್ಕಪ್ಪನಾಗಿದ್ದು, ಅವರೂ ಸಹ ನಿವೃತ್ತ ಶಿಕ್ಷಕರೆಂದರೆ ಸರಿ. 4 ನೇ ವಾದಿಯಾದ ಯುಮುನಾ ವಾಮನ ನಾಯ್ಕ ನನ್ನ ಅತ್ತೆಯಾಗಿರುತ್ತಾರೆ. ರುಕ್ಮಿಣಿ ಯೋಗೇಶ್ವರ ನಾಯ್ಕರವರು ನನ್ನ ತಂದೆಯವರ ಅಜ್ಜಿಯಾಗಿರುತ್ತಾರೆ. ರುಕ್ಮಿಣಿ ನಾಯ್ಕರವರಿಗೆ ಸಾವಿತ್ರಿ ಹಾಗೂ ಸೀತಾಬಾಯಿ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ರುಕ್ಮಿಣಿ ಯೋಗೇಶ್ವರ ನಾಯ್ಕ ರವರಿಗೆ ಗಂಡು ಸಂತಾನ ಇರುವುದಿಲ್ಲ. ಸಾವಿತ್ರಿರವರು ರುಕ್ಮಿಣಿ ನಾಯ್ಕರವರ ಹಿರಿಯ ಮಗಳಾಗಿರುತ್ತಾರೆ.

ದಾವೆಯನ್ನು ದುರಸ್ತಿಪಡಿಸುವ ಪೂರ್ವದಲ್ಲಿ ಮೂಲ ದಾವೆಯಲ್ಲಿ ವಾದಿಯಾದ ಶ್ರೀಮತಿ ಲಲಿತಾ ನಾಯ್ಕ ಹಾಗೂ 2 ರಿಂದ 5 ನೇ ಪ್ರತಿವಾದಿಯರಾದ ಗಜಾನನ, ಯಮುನಾ, ಲೀಲಾವತಿ, ಸರೋಜಿನಿ ರವರು ಸಾವಿತ್ರಿಯವರ ಮಕ್ಕಳು ಎಂದರೆ ಸರಿ. ಸಾವಿತ್ರಿಯವರನ್ನು ಹೆಗಡೆ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದು, ಹೆಗಡೆ ಗ್ರಾಮವು ಹೊನ್ನಾವರದಿಂದ ಅಂದಾಜು 25-26 ಕಿ.ಮೀ. ದೂರದಲ್ಲಿದೆ.

ದಾವೆಯನ್ನು ದುರಸ್ತಿಪಡಿಸುವ ಪೂರ್ವದಲ್ಲಿ ಮೂಲ ದಾವೆಯಲ್ಲಿ ಇರುವಂತಹ 6 ನೇ ಪ್ರತಿವಾದಿಯಾದ ಹೆಚ್.ಆರ್. ಕೃಷ್ಣಮೂರ್ತಿಯವರಿಂದ 15 ನೇ ಪ್ರತಿವಾದಿಯರಾದ ಹೆಚ್.ಆರ್.ಶಾರದಾ ರವರೆಲ್ಲರೂ ಸೀತಾಬಾಯಿಯವರ ಮಕ್ಕಳು ಎಂದರೆ ಸರಿ. ಸೀತಾಬಾಯಿಯವರನ್ನು ಸಾಗರ ತಾಲೂಕಿನ ಹೊಸನಗರ ಪಟ್ಟಣಕ್ಕೆ ಮದುವೆ ಮಾಡಿಕೊಟ್ಟಿದ್ದು, ಹೊಸನಗರ ಪಟ್ಟಣವು ಹೊನ್ನಾವರದಿಂದ ಅಂದಾಜು 100 ಕಿ.ಮೀ. ದೂರದಲ್ಲಿದೆ. ದಾವಾ ಸ್ಥಳವು ಹೊನ್ನಾವರ ಗ್ರಾಮದಲ್ಲಿನ ಸ.ನಂಃ 351/1 ಕ, ಕ್ಷೇತ್ರಃ 0-6-8 ಎಂದರೆ ಸರಿ. ಸದ್ರಿ ದಾವಾ ಸ್ಥಳದಲ್ಲಿ ಕಟ್ಟಡ ಹಾಗೂ ಗಿಡ ಮರಗಳು ಮೊದಲು ಇದ್ದವು, ಆದರೆ ಈಗ ಯಾವುದೇ ಕಟ್ಟಡ ಹಾಗೂ ಗಿಡಮರಗಳು ದಾವಾ ಸ್ಥಳದಲ್ಲಿ ಇರುವುದಿಲ್ಲ. ದಾವಾ ಸ್ಥಳವು ವಾದಿ ಹಾಗೂ ಪ್ರತಿವಾದಿಯರ ಕಬ್ಜಾ ವೈವಾಟಿಯಲ್ಲಿಲ್ಲ ಎಂದರೆ ಸರಿ. ಸದ್ರಿ ದಾವಾ ಸ್ಥಳವನ್ನು ನೆರೆ ಹೊರೆಯವರು ಸೈಕಲ್ ಹಾಗೂ ಮೋಟಾರ್ ಸೈಕಲನ್ನು ನಿಲ್ಲಿಸಲು ಮತ್ತು ಸದ್ರಿ ವಾಹನಗಳನ್ನು ತೆಗೆದುಕೊಂಡು ಆ ಕಡೆ ಈ ಕಡೆ ಹೋಗಿ ಬರಲು ಉಪಯೋಗಿಸುತ್ತಾ ಬಂದಿದ್ದಾರೆ ಎಂದರೆ ಸರಿ.

ರುಕ್ಮಿಣಿ ಯೋಗೇಶ್ವರ ನಾಯ್ಕ ರವರು ತಮ್ಮ ಜೀವಿತ ಕಾಲದಲ್ಲಿ ತಮ್ಮ ಎರಡೂ ಮಕ್ಕಳ ಹೆಸರಿಗೆ 1957 ನೇ ಸಾಲಿನಲ್ಲಿ ದಾನ ಪತ್ರದ ಮೂಲಕ ದಾವಾಸ್ತಿಯನ್ನು ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ರುಕ್ಮಿಣಿ ಯೋಗೇಶ್ವರ ನಾಯ್ಕ ರವರು ಮೃತರಾದ ತರುವಾಯ ಸದ್ರಿ ದಾವಾ ಸ್ಥಳದ ದಾಖಲೆಗೆ ಅವರ ಮಕ್ಕಳ ಹೆಸರು ನಮೂದಾಗಿದೆ ಎಂದರೆ

ಸರಿ. ಈ ದಾವೆಗೆ ಪ್ರತಿವಾದಿಯರು ಸಲ್ಲಿಸಿದ ಉದಾಹರಣೆಯ ಪ್ರತಿಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ರುಕ್ಮಿಣಿ ಯೋಗೇಶ್ವರ ನಾಯ್ಕುರವರು ಮೃತರಾದ ವರ್ಷ ನನಗೆ ಗೊತ್ತಿಲ್ಲ. ಸಾವಿತ್ರಿ ರವರು ಅಂದಾಜು 1994 ನೇ ಸಾಲಿನಲ್ಲಿ ಮೃತರಾಗಿದ್ದಾರೆ. ಸೀತಾಬಾಯಿಯವರು ದಿನಾಂಕಃ 05.01.2000 ನೇ ಸಾಲಿನಲ್ಲಿ ಮೃತರಾಗಿದ್ದಾರೆ ಎಂದರೆ ಸರಿ.

ರುಕ್ಮಿಣಿ ಯೋಗೇಶ್ವರ ನಾಯ್ಕುರವರು ಜೀವಿತ ಕಾಲದಲ್ಲಿ ಸೀತಾಬಾಯಿಯವರು ಪದೇ ಒದೇ ಹೊಸನಗರ ಪಟ್ಟಣದಿಂದ ಹೋಗಿ ಬಂದು ಮಾಡುತ್ತಿದ್ದರು ಎಂದಾಗ ಸಾಕ್ಷಿಯು ವರ್ಷದಲ್ಲಿ ಒಂದೆರಡು ಬಾರಿ ಹೋಗಿ ಬಂದು ಮಾಡುತ್ತಿದ್ದರು ಹಾಗೂ ಬಂದಾಗ 4-5 ದಿನ ಇಲ್ಲಿ, ಹಾಗೂ ಇನ್ನೂ 4-5 ದಿನ ಹೆಗಡೆ ಗ್ರಾಮದಲ್ಲಿ ನನ್ನ ಅಜ್ಜಿಯ ಜೊತೆ ವಾಸವಿರುತ್ತಿದ್ದರು ಎಂಬುದಾಗಿ ನುಡಿದಿರುತ್ತಾರೆ.

ನನ್ನ ಅಜ್ಜಿ ಸಾವಿತ್ರಿ ಹಾಗೂ ಸೀತಾಬಾಯಿಯವರು ಅನ್ಯೋನ್ಯವಾಗಿದ್ದರು ಎಂದರೆ ಸರಿ. ನನ್ನ ಅಜ್ಜಿ ಹಾಗೂ ಸೀತಾಬಾಯಿಯವರು ಸಂಬಂಧ ತಾಯಿ ಮಗಳ ಸಂಬಂಧವಾಗಿತ್ತು ಎಂದಾಗ ಸಾಕ್ಷಿಯು ಆ ರೀತಿ ಇಲ್ಲ, ಆದರೆ ಎಲ್ಲಾ ಸಂಬಂಧಗಳಂತೆ ಅನ್ಯೋನ್ಯವಾಗಿದ್ದರು ಎಂಬುದಾಗಿ ನುಡಿದಿದ್ದಾರೆ. ನನ್ನ ಅಜ್ಜಿ ಸಾವಿತ್ರಿಯವರು ಸೀತಾಬಾಯಿಯವರಿಗಿಂತ ಸ್ಥಿತಿವಂತರಾಗಿದ್ದರು ಎಂದರೆ, ಇಬ್ಬರೂ ಸಹ ಒಂದೇ ರೀತಿಯಲ್ಲಿ ಸ್ಥಿತಿವಂತರಾಗಿದ್ದರು ಎಂಬುದಾಗಿ ನುಡಿದಿದ್ದಾರೆ. ಸೀತಾಬಾಯಿಯವರಿಗೆ ಹೆಚ್ಚು ಮಕ್ಕಳು ಇದ್ದುದರಿಂದ ಅವರನ್ನು ಸಾಕಿ ಸಲುಹಿಸಲು ಕಷ್ಟವಾಗುತ್ತಿತ್ತು ಎಂದಾಗ ಸಾಕ್ಷಿಯು ಅವರು ಚೆನ್ನಾಗಿ ದುಡಿಯುತ್ತಿದ್ದರು ಎಂಬುದಾಗಿ ನುಡಿದಿದ್ದಾರೆ. ಸೀತಾಬಾಯಿಯವರು ಹೋಗಿ ಬಂದು ಮಾಡುವಾಗ ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪನವರು ಶಿಕ್ಷಕರಾಗಿ ಸಂಬಳವನ್ನು ಪಡೆಯುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರ ಆದಾಯದ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪ ಶಿಕ್ಷಕರಾದ ಕಾಲಕ್ಕೆ ಸೀತಾಬಾಯಿಯವರ ಮಕ್ಕಳು ಯಾವುದೇ ಉದ್ಯೋಗದಲ್ಲಿರಲಿಲ್ಲ ಎಂದರೆ ಸರಿ, ಆದರೆ ಸೀತಾಬಾಯಿಯವರ ಮಕ್ಕಳು ವ್ಯವಹಾರವನ್ನು ನಡೆಸುತ್ತಿದ್ದರು ಎಂಬುದಾಗಿ ನುಡಿದಿದ್ದಾರೆ. ಸೀತಾಬಾಯಿಯವರ ಮಕ್ಕಳು ವ್ಯವಹಾರ ಮಾಡುತ್ತಿರಲಿಲ್ಲ, ಅವರು ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು ಎಂದರೆ, ಸಾಕ್ಷಿಯು ನಾನೂ ಆ ಸಮಯದಲ್ಲಿ ಚಿಕ್ಕವನಾಗಿದ್ದು, ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ.

ನನ್ನ ಅಜ್ಜಿ ಸಾವಿತ್ರಿಯವರು ಅವರ ತಾಯಿಯಿಂದ ಪಡೆದುಕೊಂಡಂತಹ 1/2 ಹಕ್ಕಿನ ಆಸ್ತಿಯ ಕುರಿತಾಗಿ ಸೀತಾಬಾಯಿಯವರಿಗೆ ದಿನಾಂಕಃ 01.07.1988 ರಲ್ಲಿ ಮರಣ ಶಾಸನವನ್ನು ಹಾಗೂ ಅದೇ ದಿನ ಒಂದು ಜಿ.ಪಿ.ಎ. ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ವಿಲ್ ಗೆ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಗಜಾನನ ಮತ್ತು ಯುಮುನಾ ವಾಮನ ನಾಯ್ಕ ರವರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಹೌದು ಸದ್ರಿ ವಿಲ್ ನೋಡಿದ ಮೇಲೆ ನನಗೆ ಗೊತ್ತಾಗಿದೆ ಎಂಬುದಾಗಿ ನುಡಿದಿದ್ದಾರೆ. ಸದ್ರಿ ವಿಲ್ ನೋಂದಾಯಿತವಾದ ವಿಲ್ ಆಗಿರುವುದಿಲ್ಲ. ಸೀತಾಬಾಯಿರವರು ಮೃತರಾದ 14 ದಿನಗಳ ತರುವಾಯ ಅವರ ಮಕ್ಕಳಾದ 6 ರಿಂದ 15 ನೇ ಪ್ರತಿವಾದಿಯರಿಗೆ ಪೆಟ್ಟಿಗೆಯನ್ನು ತೆಗೆಯುವಾಗ ವಿಲ್ ಸಿಕ್ಕಿದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜಿ ಸೀತಾಬಾಯಿಯವರು ವಿಲ್ ಮಾಡಿಕೊಟ್ಟಿದ್ದರಿಂದ ನಮಗೆ ಸದ್ರಿ ಆಸ್ತಿಯ ಕುರಿತಾಗಿ ಯಾವುದೇ ಹಕ್ಕಿಲ್ಲದಿದ್ದರೂ ಸಹ ನಾವು ದುರುದ್ದೇಶದಿಂದ ಸದ್ರಿ ದಾವಾಸ್ತಿಗೆ ಸಂಬಂದಧಪಟ್ಟಂತೆ ನಮ್ಮ ಕುಟುಂಬದವರ ಹೆಸರುಗಳನ್ನು ಕಾಗದ ಪತ್ರಗಳಲ್ಲಿ ನಮೂದು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ವಿಲ್ ಮಾಡಿಕೊಟ್ಟಿದ್ದರಿಂದ ನನ್ನ

ಅಜ್ಜಿಯ ಕವಲಿನವರಾದ ನಮ್ಮೆಲ್ಲರಿಗೂ ಯಾವುದೇ ರೀತಿಯ ಹಕ್ಕಿಲ್ಲ ಎಂದರೆ ಸರಿಯಲ್ಲ. 1988 ನೇ ಸಾಲಿನಲ್ಲಿ ವಿಲ್ ಆಗಿದ್ದರಿಂದ ಮತ್ತು 2014 ನೇ ಸಾಲಿನಲ್ಲಿ ದಾವೆಯನ್ನು ದಾಖಲಿಸಿದ್ದರಿಂದ ಸದ್ರಿ ದಾವೆಯು ಲಿಮಿಟೇಷನ್‌ನಿಂದ ಬಾಧಕವಾಗುತ್ತದೆ ಎಂದರೆ ಸರಿಯಲ್ಲ. ಸೀತಾಬಾಯಿಯವರ ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.